## ಮಾರ್ಚ್- ಸೆಪ್ಟೆಂಬರ್ ಅವಧಿಯಲ್ಲಿ ಬಾಧೆ ಹೆಚ್ಚಳ | ತೋಟಕ್ಕೆ ಹೆಚ್ಚು ಬಿಸಿಲು ಬೀಳುವಂತೆ ನೋಡಿಕೊಳ್ಳಲು ಸಲಹೆ

# ಮಲೆನಾಡಿನ ಅಡಕೆಗೆ ಎರಡು ಶಿಲೀಂಧ್ರಗಳಿಂದ ಎಲೆಚುಕ್ಕೆ ರೋಗ

■ **ವಿಜಯವಾಣಿ ಸುದ್ದಿಜಾಲ ಶಿವಮೊಗ್ಗ**

ಜಿಲ್ಲೆಯ ಕೆಲವು ಭಾಗಗಳಲ್ಲಿ ಎಲೆ ಚುಕ್ಕೆ ಬಾಧಿತ ಮರಗಳ ಸೋಗೆಗಳ ಮೇಲ್ಭಾಗದಲ್ಲಿ ಹಳದಿ ಮತ್ತು ಕಪ್ಪು ಬಣ್ಣದ ಚುಕ್ಕೆಗಳು ಕಾಣಿಸುತ್ತಿವೆ. ಇವು ಕ್ರಮೇಣ ಇಡೀ ಹೆಡವನ್ನು ಆವರಿಸುತ್ತವೆ. ನಂತರ ಹೆಡಗಳು ಒಣಗಿ ಜೋತು ಬಿದ್ದು ಮರದ ಶಕ್ತಿ ಕಡಿಮೆಯಾಗಿ ಇಳುವರಿ ಕುಂಠಿತವಾಗುತ್ತದೆ ಎಂದು ಶಿವಮೊಗ್ಗ ಅಡಕೆ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ನಾಗರಾಜಪ್ಪ ಅಡಿವಪ್ಪರ್ ತಿಳಿಸಿದ್ದಾರೆ.

ಕೊಲ್ಲೆಟೋಟ್ರೈಕಮ್ ಗ್ಲೀಯೋಸ್ಪೊರೈಡ್ಸ್ ಮತ್ತು ಫಿಲ್ಲೊಸ್ಟಿಕ್ಟ ಅರಕೆ ಎಂಬ ಎರಡು ಶಿಲೀಂಧ್ರಗಳು ಎಲೆ ಚುಕ್ಕೆ ರೋಗಕ್ಕೆ ಕಾರಣವಾಗಿವೆ. ಶಿಲೀಂಧ್ರದ ಕಣಗಳು ಗಾಳಿಯಲ್ಲಿ ಸೇರಿ ಗರಿಗಳನ್ನು ತಲುಪುತ್ತವೆ. ಹಾಗೆಯೇ ತೇವಭರಿತ ಬಿಸಿಲಿನ ವಾತಾವರಣ, ಕಡಿಮೆ ಉಷ್ಣಾಂಶ ಮತ್ತು ಹೆಚ್ಚಿನ ಆರ್ಧ್ರತೆಯಿಂದ ರೋಗ ಹರಡುವಿಕೆ ಹೆಚ್ಚುತ್ತದೆ. ಈ ರೋಗ ಮಾರ್ಚ್-ಸೆಪ್ಟೆಂಬರ್ ಅವಧಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಎಂದಿದ್ದಾರೆ.

**ಎಲೆ ಚುಕ್ಕೆ ನಿರ್ವಹಣೆ ಹೇಗೆ?:** ರೋಗ ಬಾಧಿತ ಒಣಗಿದ ಗರಿಗಳನ್ನು ಕತ್ತರಿಸಿ ತೆಗೆದು ನಾಶಪಡಿಸುವುದರಿಂದ ರೋಗ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬಹುದು. ಬಿಸಿಲು ಬೀಳುವಂತೆ ಮಾಡಲು ಅಂತರ ಬೆಳೆಗಳ ಅಥವಾ ಕಾಡು ಮರಗಳ ಹೆಚ್ಚುವರಿ ರೆಂಬೆಗಳನ್ನು ಕತ್ತರಿಸಿ ತೆಗೆಯುವುದು. ರೋಗ ಲಕ್ಷಣದ ಆರಂಭದಲ್ಲಿ ಮುಂಜಾಗ್ರತೆ ಕ್ರಮವಾಗಿ ಶಿಲೀಂಧ್ರನಾಶಕಗಳಾದ ಮ್ಯಾಂಕೋಜೆಬ್ (2.5 ಗ್ರಾಂ) ಅಥವಾ ಸಾಫ್ (ಮ್ಯಾಂಕೋಜೆಬ್ ಶೇ.63 ಮತ್ತು ಶೇ.12 ಕಾರ್ಬೆನ್‌ಡೈಜೀಮ್) 2ಗ್ರಾಂ ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಹೆಕ್ಸಕೊನಜೋಲ್ ಶೇ.5 ಎಸ್‌ಸಿ ಅಥವಾ ಶೇ.25 ಪ್ರೊಪಿಕೊನಜೋಲ್ ಇಸಿ ಅಂತರವ್ಯಾಪಿ ಶಿಲೀಂಧ್ರನಾಶಕಗಳನ್ನು 1 ಮಿಲೀನಂತೆ ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಅಂಟು ದ್ರಾವಣದ (1ಮಿಲೀ) ಜತೆಗೆ ಸಿಂಪಡಿಸಬೇಕು ಎಂದು ತಿಳಿಸಿದ್ದಾರೆ.



ಸಾಗರ ತಾಲೂಕು ಮಂಚಾಲೆಯ ಪ್ರಕಾಶ್ ಅವರ ಅಡಕೆ ತೋಟದಲ್ಲಿನ ಕಾಡು ಕೃಷಿಯನ್ನು ಐಸಿಎಆರ್-ಸಿಪಿಸಿಆರ್ ಐ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ವೀಕ್ಷಿಸಿದರು. ಡಾ. ರವಿ ಭಟ್ , ಡಾ. ವಿನಾಯಕ ಹೆಗಡೆ, ಡಾ. ನಿರ್ಮಲ್‌ಕುಮಾರ್, ಪ್ರಕಾಶ್ ಮಂಚಾಲೆ ಇದ್ದರು.

> ಕಾಡು ತೋಟದ ಕೃಷಿ ಕಲ್ಪನೆ ಅದ್ಭುತವಾಗಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಕೃತಿಯ ವೈವಿಧ್ಯತೆಯನ್ನೂ ಉಳಿಸಿಕೊಂಡು ಅದರಲ್ಲಿ ಆದಾಯ ಬರುವಂತೆ ತೋಟಗಳನ್ನು ನಿರ್ವಹಣೆ ಮಾಡಿರುವುದು ಶ್ಲಾಘನೀಯ.
>
> **|ಡಾ. ವಿನಾಯಕ ಹೆಗಡೆ** ಕೃಷಿ ವಿಜ್ಞಾನಿ

## ಕಾಡು ಕೃಷಿ ವಿಧಾನದ ಸಂಶೋಧನೆ

**» ಕಾಸರಗೋಡು ಸಿಪಿಸಿಆರ್‌ಐ ಸಂಸ್ಥೆ ವಿಜ್ಞಾನಿ ಡಾ. ರವಿ ಭಟ್ ಮಾಹಿತಿ**

**ತ್ಯಾಗರ್ತಿ:** ಅಡಕೆ ತೋಟದಲ್ಲಿ 13 ವಿಧದ 5 ಸಾವಿರ ಔಷಧ ಸಸ್ಯಗಳನ್ನು ಬೆಳೆಸಿದ ಮಂಚಾಲೆ ಪ್ರಕಾಶ್ ಅವರ ಕೃಷಿ ಪದ್ಧತಿ ಸಂಶೋಧನೆಗೆ ಪೂರಕವಾಗಿದೆ ಎಂದು ಕಾಸರಗೋಡಿನ ಸಿಪಿಸಿಆರ್‌ಐ ಸಂಸ್ಥೆ ವಿಜ್ಞಾನಿ ಡಾ. ರವಿ ಭಟ್ ಹೇಳಿದರು.

ಸಾಗರ ತಾಲೂಕು ಮಂಚಾಲೆಯ ಪ್ರಕಾಶ್ ಅವರು 10 ಗುಂಟೆ ಅಡಕೆ ತೋಟದಲ್ಲಿ ಮಾಡಿರುವ ಕಾಡು ಕೃಷಿ ವಿಧಾನವನ್ನು ಶುಕ್ರವಾರ ವೀಕ್ಷಿಸಿ ಮಾತನಾಡಿದ ಅವರು, ಇದು ಹೊಸ ಬಗೆಯ ಕೃಷಿ ಪದ್ಧತಿಯಾಗಿದೆ. ಅಡಕೆ ತೋಟದ ಎಲ್ಲ ಮರಗಳೂ ಆರೋಗ್ಯಯುತವಾಗಿವೆ. ಮಣ್ಣಿನಲ್ಲಿಯೂ ಎರೆಹುಳು ಯಥೇಚ್ಛವಾಗಿದೆ. ಕೃಷಿ ಭೂಮಿ ಸತ್ವಯುತವಾಗಿದ್ದು ಈ ಕೃಷಿ ಬಗ್ಗೆ ಹೆಚ್ಚಿನ ಸಂಶೋಧನೆಯಾಗಬೇಕಿದೆ. ಆ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಪ್ರಕಾಶ್ ಮಂಚಾಲೆ ಮಾತನಾಡಿ, ನಮ್ಮ ಕೃಷಿ ಪದ್ಧತಿಯ ಲೋಪಗಳು ಹಾಗೂ ಅಭಿವೃದ್ಧಿ ಬಗ್ಗೆ ಸಿಪಿಸಿಆರ್‌ಐ ವಿಜ್ಞಾನಿಗಳ ಬಳಿ ಸಲಹೆ ಕೋರಲಾಗಿದೆ. ಅಡಕೆ ತೋಟದಲ್ಲಿ ಅಮೃತ ಬಳ್ಳಿ, ವೀಳ್ಯದೆಲೆ, ಕಾಳುಮೆಣಸು, ಚವ್ಯ, ಕಾಡುಹೆಸರು, ಆಹಾರ ರೂಪದಲ್ಲಿ ಬಳಸಿಕೊಳ್ಳಲು ವರಾಹಿ ಗಡ್ಡೆ, ಕಸ್ತೂರಿ ಅರಿಶಿಣ, ಸೂಜಿಮೆಣಸು ಮ್ಯಾಫಿಯಾ, ಕಾಫಿ, ಚಿತ್ರಮೂಲ, ರಾಸ್ನಾ, ಕಚೋರ ಇನ್ನಿತರ ಸಸಿಗಳನ್ನು ಬೆಳೆಸಿದ್ದೇವೆ. ಅದರ ಬಗ್ಗೆ ವಿಜ್ಞಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.